# ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962

**(ಕರ್ನಾಟಕ ರಾಜ್ಯಪತ್ರ, ಗುರುವಾರ ಮಾರ್ಚ್ 22, 2007, ಭಾಗ – IVಎ, 322 ರಿಂದ 329ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಗೃಹ ರಕ್ಷಕ ದಳದ ರಚನೆ ಮತ್ತು ಕಮಾಂಡೆಂಟ್ ಜನರಲ್ ಮತ್ತು ಕಮಾಂಡೆಂಟರ ನೇಮಾಕಾತಿ
4. ಸದಸ್ಯರ ನೇಮಕಾತಿ
5. ಸದಸ್ಯರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು

5ಎ. ಗೃಹ ರಕ್ಷಕ ದಳದವರು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಲು ನಿಯೋಜಕನ ಹೊಣೆಗಾರಿಕೆ

6. ಅಧಿಕಾರಗಳು, ರಕ್ಷಣೆ ಮತ್ತು ನಿಯಂತ್ರಣ
7. ಪೊಲೀಸ್ ದಳದ ಅಧಿಕಾರಿಗಳಿಂದ ನಿಯಂತ್ರಣ
8. ಸದಸ್ಯನಾಗಿರುವುದು ನಿಂತುಹೋದ ನಂತರ ಪ್ರಮಾಣ ಪತ್ರ, ಆಯುಧಗಳು, ಇತ್ಯಾದಿಗಳನ್ನು ಹಿಂದಕ್ಕೆ ಒಪ್ಪಿಸುವುದು.
9. ಕರ್ತವ್ಯ ನಿರ್ಲಕ್ಷ್ಯ, ಇತ್ಯಾದಿಗಳಿಗಾಗಿ ಸದಸ್ಯರಿಗೆ ಶಿಕ್ಷೆ
10. ದಂಡನೆ
11. ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮ
12. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
13. ಗೃಹ ರಕ್ಷಕ ದಳದ ಸದಸ್ಯರು ಲೋಕ ನೌಕರರಾಗಿರುವುದು
14. ಗೃಹ ರಕ್ಷಕ ದಳಗಳ ಸದಸ್ಯರನ್ನು ಸ್ಥಳೀಯ ಪ್ರಾಧಿಕಾರಗಳ ಸದಸ್ಯರಾಗುವುದರಿಂದ ಅನರ್ಹಗೊಳಿಸದಿರುವುದು
15. 1957ರ ಕರ್ನಾಟಕ ಅಧಿನಿಯಮ 4ರ ತಿದ್ದುಪಡಿ
16. ಕೆಲವು ಅಧಿನಿಯಮಗಳ ನಿರಸನ ಮತ್ತು ಉಳಿಸುವಿಕೆಗಳು
17. 1962ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4 ರ ನಿರಸನ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## I

**1962ರ ಅಧಿನಿಯಮ 35.–** ತುರ್ತು ಸ್ಥಿತಿಯ ದೃಷ್ಟಿಯಿಂದ ಗೃಹ ರಕ್ಷಕ ಸಂಘಟನೆಯು, ಸದ್ಯದಲ್ಲಿ ರಾಜ್ಯದ ಮುಂಬಯಿ ಕರ್ನಾಟಕ ಜಿಲ್ಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದೆ. ಸದ್ಯದ ತುರ್ತುಪರಿಸ್ಥಿತಿಯ ದೃಷ್ಟಿಯಿಂದ ವ್ಯಕ್ತಿಗಳ ಸಂರಕ್ಷಣೆ, ಸ್ವತ್ತುಗಳ ಭದ್ರತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸಂಬಂಧಪಟ್ಟಂತೆ ಕರ್ತವ್ಯಗಳನ್ನು ನಿರ್ವಹಿಸಲು ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ಸ್ವಯಂ ಸೇವಾ ನಿಕಾಯವನ್ನು ಹೊಂದಿರುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದ್ದರಿಂದ ಇಡೀ ರಾಜ್ಯದಲ್ಲಿ ಗೃಹ ರಕ್ಷಕರನ್ನು ಸಂಘಟಿಸಲು ಪ್ರಸ್ತಾವಿಸಲಾಗಿದೆ. ಸಂಘಟನೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಮತ್ತು ನಿರ್ವಹಿಸುವ ಸಲುವಾಗಿ, ಏಕರೂಪದ ಒಂದು ಕಾನೂನನ್ನು ಹೊಂದುವುದು ಅವಶ್ಯವಾಗಿದೆ. ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ವಿಧಾನಮಂಡಲವು ಅಧಿವೇಶನದಲ್ಲಿಲ್ಲದಿರುವುದರಿಂದ, ಮೈಸೂರು ಗೃಹ ರಕ್ಷಕ ದಳ ಅಧ್ಯಾದೇಶ, 1962ನ್ನು ಹೊರಡಿಸಲಾಯಿತು. ಸದರಿ ಅಧ್ಯಾದೇಶದ ಬದಲಾಗಿ ಈ ವಿಧೇಯಕವನ್ನು ಮಂಡಿಸಲು ಪುನ: ಉದ್ದೇಶಿಸಲಾಗಿದೆ.

ನಿರಸನ ಮತ್ತು ಉಳಿಸುವಿಕೆಗಳಿಗೆ ಸಂಬಂಧಿಸಿದ ಎರಡು ಖಂಡಗಳ ಮತ್ತು ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ವಿಧಾನಮಂಡಲದ ಮುಂದೆ ಮಂಡಿಸಲು ಒಂದು ಉಪಬಂಧದ ಸೇರ್ಪಡೆಯ ಹೊರತಾಗಿ ಉಳಿದವುಗಳ ಸಂಬಂಧದಲ್ಲಿ ವಿಧೇಯಕದ ಉಪಬಂಧಗಳು ಅಧ್ಯಾದೇಶದ ಉಪಬಂಧಗಳಿಗೆ ತದ್ರೂಪವಾಗಿವೆ.

(ದಿನಾಂಕ 1ನೇ ಡಿಸೆಂಬರ್ 1962ರ, ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV–2ಎ.ನಲ್ಲಿ ಸಂ.238 ಆಗಿ ಪುಟ 8ರಲ್ಲಿ ಪ್ರಕಟವಾಗಿದೆ).

## II

**1977ರ ತಿದ್ದುಪಡಿ ಮಾಡುವ ಅಧಿನಿಯಮ 11.-** ಕರ್ನಾಟಕ ರಾಜ್ಯ ಗೃಹ ರಕ್ಷಕ ದಳವು ರಾಜ್ಯದಲ್ಲಿನ ಶಾಸನಬದ್ಧ ಒಂದು ಸಂಸ್ಥೆಯಾಗಿದ್ದು, ಚುನಾವಣೆಗಳ, ರೈಲ್ವೆ ಮುಷ್ಕರಗಳ ಮತ್ತು ರಾಜಕೀಯ ಮತ್ತು ಕಾರ್ಮಿಕ ಪ್ರದರ್ಶನಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಅನಿವಾರ್ಯ ಹಾಗೂ ನಿರ್ಣಾಯಕವಾಗಿದೆ. ಗೃಹ ರಕ್ಷಕ ದಳದ ಸದಸ್ಯರಲ್ಲಿ ಪೂರ್ಣ ಕಾಲಿಕ ವೇತನ ಪಡೆಯುವ ಕೆಲವು ಅಧಿಕಾರಿಗಳ ಹೊರತಾಗಿ, ಉಳಿದೆಲ್ಲರೂ ಖಾಸಗಿ ಹಾಗೂ ಸರ್ಕಾರಿ ಉದ್ದಿಮೆಗಳಲ್ಲಿ ಕೆಲಸದಲ್ಲಿರುವ ಸ್ವಯಂ ಸೇವಕರಾಗಿರುತ್ತಾರೆ. ಗೃಹ ರಕ್ಷಕ ದಳವು ವೈದ್ಯರು, ವಕೀಲರು, ಶಿಕ್ಷಕರು, ಇಂಜಿನಿಯರುಗಳು, ವ್ಯಾಪಾರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ಮತ್ತು ರೈತರುಗಳಂಥ ವಿವಿಧ ವೃತ್ತಿಗಳು ಮತ್ತು ವ್ಯಾಪಾರಗಳಿಗೆ ಸೇರಿದವರಿಂದ ಕೂಡಿರುತ್ತದೆ. ತುರ್ತು ಸನ್ನಿವೇಶಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಅಥವಾ ಸಾರ್ವಜನಿಕ ಸ್ವತ್ತನ್ನು ರಕ್ಷಿಸಲು ಅಂಥ ಸದಸ್ಯರುಗಳನ್ನು ಕರ್ತವ್ಯದ ಮೇಲೆ ಕರೆಯಬೇಕಾದಾಗ ಅವರ ನಿಯೋಜಕರು ಅವರ ಗೈರು ಹಾಜರಿಯನ್ನು ಕರ್ತವ್ಯದ ಮೇಲಿನ ಗೈರು ಹಾಜರಿ ಎಂದು ಪರಿಗಣಿಸುವುದಿಲ್ಲವಾದುದರಿಂದ ಅವರನ್ನು ಕರ್ತವ್ಯದ ಮೇಲೆ ಕರೆಯಲು ತೊಂದರೆಯಾಗಿರುವುದು ಅನುಭವಕ್ಕೆ ಬಂದಿದೆ. ತತ್ಪರಿಣಾಮವಾಗಿ ನೌಕರರು ಗೈರು ಹಾಜರಾದ ಅವಧಿಯ ಮಜೂರಿ, ಸಂಬಳ, ಇತ್ಯಾದಿಗಳ ಕಡಿತವನ್ನು ಎದುರಿಸಬೇಕಾಗುತ್ತದೆ. ಅಂಥ ವ್ಯಕ್ತಿಗಳು ಕರೆಗೆ ಓಗೊಟ್ಟು ಗೃಹ ರಕ್ಷಕರಾಗಿ ಸೇವೆ ಸಲ್ಲಿಸಲು ಪ್ರತಿಕ್ರಿಯಿಸಿದಾಗ ಕೆಲವು ಸಂದರ್ಭಗಳಲ್ಲಿ, ಅವರು ಕರ್ತವ್ಯದಿಂದ ಗೈರು ಹಾಜರಾಗಿದ್ದಕ್ಕಾಗಿ ಅವರ ವಿರುದ್ಧ ಇಲಾಖಾ ವ್ಯವಹರಣೆಗಳನ್ನು ಸಹ ಹೂಡಲಾಗಿತ್ತು.

1962ರ ಗೃಹ ರಕ್ಷಕದಳ ಅಧಿನಿಯಮ (1962ರ ಕರ್ನಾಟಕ ಅಧಿನಿಯಮ 35) ದಲ್ಲಿ ಗೃಹ ರಕ್ಷಕರಿಗೆ ಅಂಥ ಆಕಸ್ಮಿಕ ಸಂದರ್ಭಗಳಲ್ಲಿ ರಕ್ಷಣೆ ನೀಡಲು ಯಾವ ಉಪಬಂಧವೂ ಇರುವುದಿಲ್ಲ. ಆದ್ದರಿಂದ, ಕರೆಗೆ ಹಾಜರಾಗುವ ಉದ್ಯೋಗಿಗಳಿಗೆ ವೇತನ, ಮಜೂರಿ ಇತ್ಯಾದಿ ಕಡಿತದಿಂದ ರಕ್ಷಣೆ ನೀಡುವ ದೃಷ್ಟಿಯಿಂದ ಗೃಹ ರಕ್ಷಕ ಕರ್ತವ್ಯದ ಮೇಲಿರುವಾಗ ಅವರ ಕಚೇರಿಗಳಿಂದ ಗೈರು ಹಾಜರಾದ ಅವಧಿಯನ್ನು ವೇತನದ ಮೇಲಿನ ಕರ್ತವ್ಯವೆಂದು ಅವರು ಅರ್ಹರಾಗಿರುವ ವೇತನ ಮತ್ತು ಭತ್ಯೆಯನ್ನು ವೃತ್ತಿ ನಿರತ ಸ್ಥಳದಲ್ಲಿ ಅವರು ಕೆಲಸದ ಮೇಲಿದ್ದರೆ ಹೇಗೋ ಹಾಗೆ ನೀಡುವುದು ನಿಯೋಜಕರ ಪಾಲಿನ ಹೊಣೆಗಾರಿಕೆಯನ್ನಾಗಿ ಮಾಡಲು ಒಂದು ಉಪಬಂಧ ಕಲ್ಪಿಸುವುದು ಅವಶ್ಯವೆಂದು ಭಾವಿಸಲಾಯಿತು.

ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿಲ್ಲದಿದ್ದುದರಿಂದ, ಕರ್ನಾಟಕ ಗೃಹ ರಕ್ಷಕದಳ (ತಿದ್ದುಪಡಿ) ಅಧ್ಯಾದೇಶ, 1977ನ್ನು ಪ್ರಖ್ಯಾಪಿಸಲಾಯಿತು.

ಸದರಿ ಆಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲು ಉದ್ದೇಶಿಸಿದೆ.

(ದಿನಾಂಕ 26ನೇ ಮಾರ್ಚ್ 1977ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV-2ಎನಲ್ಲಿ, ಸಂಖ್ಯೆ 235 ಆಗಿ ಪುಟ 4ರಲ್ಲಿ ಪ್ರಕಟವಾಗಿದೆ.)

## III

2003ರ ತಿದ್ದುಪಡಿ ಮಾಡುವ ಅಧಿನಿಯಮ 19.- ಕರ್ನಾಟಕ ಗೃಹ ರಕ್ಷಕ ದಳ ಅಧಿನಿಯಮ, 1962ನ್ನು (1962ರ ಕರ್ನಾಟಕ ಅಧಿನಿಯಮ 35) ಈ ಮುಂದಿನ ವಿಷಯಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ,-

(i) ಗೃಹ ರಕ್ಷಕ ದಳದ ಕಮಾಂಡೆಂಟರ ಆಯ್ಕೆ ಮತ್ತು ನೇಮಕಾತಿಯ ಕಾರ್ಯವಿಧಾನ;

(ii) ಗೃಹ ರಕ್ಷಕ ದಳದ ಕಮಾಂಡೆಂಟರ ವಿದ್ಯಾರ್ಹತೆ, ಸೇವಾ ಷರತ್ತುಗಳು ಮತ್ತು ಪದಾವಧಿ.

ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು ಸಹ ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(2003ರ ವಿಧಾನ ಸಭಾ ವಿಧೇಯಕ ಸಂಖ್ಯೆ 1)

[ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 1 ಮತ್ತು 2ನೇ ನಮೂದು]

(ದಿನಾಂಕ 22.4.2003ರ ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ IV- 2 ಎ ನಲ್ಲಿ ಸಂಖ್ಯೆ 421 ಆಗಿ ಪ್ರಕಟವಾಗಿದೆ.)

# 1962ರ [1][ಕರ್ನಾಟಕ ಅಧಿನಿಯಮ][1] ಸಂಖ್ಯೆ 35

**(1962ರ ಡಿಸೆಂಬರ್ ಇಪ್ಪತ್ತೇಳನೆಯ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲ ಬಾರಿಗೆ ಪ್ರಕಟವಾಯಿತು.)**

# [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮ, 1962

**(1962ರ ಡಿಸೆಂಬರ್ ಹದಿನೆಂಟನೆಯ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ಪಡೆದಿದೆ.)**

**(1977ರ 11ಮತ್ತು 2003ರ 19 – ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ)**

**[1][ಕರ್ನಾಟಕ ರಾಜ್ಯ][1] ದಲ್ಲಿ ಗೃಹ ರಕ್ಷಕ ದಳಗಳ ರಚನೆಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.**

[1][ಕರ್ನಾಟಕ ರಾಜ್ಯ][1] ದಲ್ಲಿ ತುರ್ತು ಸ್ಥಿತಿಗಳಲ್ಲಿ ಮತ್ತು ಇತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಒಂದು ಸ್ವಯಂ ಸೇವಾ ಸಂಘಟನೆಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿಮೂರನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಇದನ್ನು ಮುಂದಿನಂತೆ ಅಧಿನಿಯಮಿಸಲಾಗಿದೆ, ಎಂದರೆ:–

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮ, 1962 ಎಂದು ಕರೆಯತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೃಹ ರಕ್ಷಕ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಗೃಹ ರಕ್ಷಕ ಎಂದು ನೇಮಕಗೊಂಡ ಒಬ್ಬ ವ್ಯಕ್ತಿ;

(ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು.

**3. ಗೃಹ ರಕ್ಷಕ ದಳದ ರಚನೆ ಮತ್ತು ಕಮಾಂಡೆಂಟ್ ಜನರಲ್ ಮತ್ತು ಕಮಾಡೆಂಟರ ನೇಮಕಾತಿ.–** (1) ರಾಜ್ಯ ಸರ್ಕಾರವು "ಗೃಹ ರಕ್ಷಕ ದಳ" ಎಂದು ಕರೆಯಲಾಗುವ ಒಂದು ಸ್ವಯಂ ಸೇವಾ ನಿಕಾಯವನ್ನು ರಚಿಸತಕ್ಕದ್ದು, ಈ ಸಂಸ್ಥೆಯ ಸದಸ್ಯರು ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ ಸಂದರ್ಭಾನುಸಾರ ಅವರಿಗೆ ವಹಿಸಬಹುದಾದಂಥ ವ್ಯಕ್ತಿಗಳ ರಕ್ಷಣೆ, ಸ್ವತ್ತುಗಳ ಭದ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆ ಮತ್ತು ನೆಮ್ಮದಿಯನ್ನು ಕಾಪಾಡುವ ಸಂಬಂಧದಲ್ಲಿ ಅಂಥ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) [1][ರಾಜ್ಯ ಸರ್ಕಾರವು, (2ಬಿ) ಉಪಪ್ರಕರಣದ ಅಡಿಯಲ್ಲಿ ಸಮಿತಿಯು ಕಳುಹಿಸಿದ ಅರ್ಹ ವ್ಯಕ್ತಿಗಳ ಪಟ್ಟಿಯಿಂದ][1] ಗೃಹ ರಕ್ಷಕ ದಳದ ಸರಿಯಾದ ಆಡಳಿತ ಮತ್ತು ನಿರ್ವಹಣೆಗಾಗಿ ಅವಶ್ಯಕ ಎಂದು ಪರಿಗಣಿಸಿದಷ್ಟು ಸಂಖ್ಯೆಯ ಕಮಾಂಡೆಂಟರುಗಳನ್ನು ನೇಮಕ ಮಾಡಬಹುದು ಮತ್ತು ಅಂಥ ಪ್ರತಿಯೊಬ್ಬ ಕಮಾಂಡೆಂಟನು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕ ಪ್ರದೇಶಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

**1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.**

[1][(2ಎ) (2)ನೇ ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರಾಗಿ ನೇಮಕ ಹೊಂದಲು ನಿಯಮಿಸಲಾದ ಅರ್ಹತೆಯನ್ನು ಹೊಂದಿರುವ ವ್ಯಕ್ತಿಗಳನ್ನು ಆಯ್ಕೆ ಮಾಡುವುದಕ್ಕಾಗಿ ಈ ಮುಂದಿನ ಸದಸ್ಯರನ್ನು ಒಳಗೊಂಡಿರುವ ಒಂದು ಸಮಿತಿ ಇರತಕ್ಕದ್ದು, ಎಂದರೆ:–

(ಎ) ಸರ್ಕಾರದ ಕಾರ್ಯದರ್ಶಿ, ಒಳಾಡಳಿತ ಮತ್ತು ಸಾರಿಗೆ ಇಲಾಖೆ.

(ಬಿ) ಕಮಾಂಡೆಂಟ್ ಜನರಲ್, ಗೃಹ ರಕ್ಷಕ ದಳ ಮತ್ತು ನಾಗರಿಕ ರಕ್ಷಣೆ.

(ಸಿ) ಡೆಪ್ಯೂಟಿ ಕಮಾಂಡೆಂಟ್ ಜನರಲ್, ಗೃಹ ರಕ್ಷಕ ದಳ ಮತ್ತು ನಾಗರಿಕ ರಕ್ಷಣೆ.

(2ಬಿ) (2ಎ) ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಸಮಿತಿಯು, ನಿಯಮಿಸಬಹುದಾದಂಥ ಕಾರ್ಯ ವಿಧಾನವನ್ನು ಅನುಸರಿಸಿದ ತರುವಾಯ, (2)ನೇ ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರಾಗಿ ನೇಮಕ ಹೊಂದಲು ಅರ್ಹರಾದ ವ್ಯಕ್ತಿಗಳ ಒಂದು ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅಂಥ ಅರ್ಹ ವ್ಯಕ್ತಿಗಳ ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2ಸಿ) ರಾಜ್ಯ ಸರ್ಕಾರದ ಇಚ್ಛೆಗೆ ಒಳಪಟ್ಟು, ಕಮಾಂಡೆಂಟರ ಪದಾವಧಿಯು ಸಾಮಾನ್ಯವಾಗಿ ಐದು ವರ್ಷಗಳ ಒಂದು ಅವಧಿಗಾಗಿ ಇರತಕ್ಕದ್ದು ಮತ್ತು ಅದನ್ನು ಐದು ವರ್ಷಗಳ ಒಂದು ಹೆಚ್ಚಿನ ಅವಧಿಗಾಗಿ ವಿಸ್ತರಿಸಬಹುದು.

(2ಡಿ) ಕಮಾಂಡೆಂಟನ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.][1]

**1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.**

(3) ರಾಜ್ಯ ಸರ್ಕಾರವು ರಾಜ್ಯದ ಗೃಹ ರಕ್ಷಕ ದಳದ ಕಮಾಂಡೆಂಟ್ ಜನರಲ್‌ನನ್ನು ನೇಮಕ ಮಾಡಿ ಅವನಿಗೆ ರಾಜ್ಯದ ಎಲ್ಲ ಗೃಹ ರಕ್ಷಕ ದಳದ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ವಹಿಸತಕ್ಕದ್ದು.

**4. ಸದಸ್ಯರ ನೇಮಕಾತಿ.–** (1) ಕಮಾಂಡೆಂಟ್ ಜನರಲ್‌ರ ಅನುಮೋದನೆಗೊಳಪಟ್ಟು, ಕಮಾಂಡೆಂಟರು ಸೇವೆಗೆ ಅರ್ಹರಾದ ಮತ್ತು ಇಚ್ಛೆಯುಳ್ಳಂಥ ಮತ್ತು ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಗೃಹ ರಕ್ಷಕ ದಳದ ಸದಸ್ಯರನ್ನಾಗಿ ಗೃಹ ರಕ್ಷಕ ದಳದ ಯಾವುದೇ ಕಮಾಂಡರ್ ಕಚೇರಿಗೆ ಅಂಥ ಯಾರೇ ಸದಸ್ಯರನ್ನು ನೇಮಕ ಮಾಡಿಕೊಳ್ಳಬಹುದು.

(2) (1)ನೇ ಉಪಪ್ರಕರಣದದಲ್ಲಿ ಏನೇ ಒಳಗೊಂಡಿದ್ದರೂ, ಕಮಾಂಡೆಂಟ್ ಜನರಲ್‌ರವರು ತಮ್ಮ ನಿಯಂತ್ರಣದಡಿಯಲ್ಲಿನ ಯಾವುದೇ ಹುದ್ದೆಗೆ ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು ನೇಮಕ ಮಾಡಿಕೊಳ್ಳಬಹುದು.

(3) ಗೃಹ ರಕ್ಷಕ ದಳದ ಪ್ರತಿಯೊಬ್ಬ ಸದಸ್ಯನು ನೇಮಕಾತಿಯ ತರುವಾಯ, ನೇಮಕಾತಿ ಪ್ರಮಾಣ ಪತ್ರವನ್ನು ಸ್ವೀಕರಿಸತಕ್ಕದ್ದು. ಅದನ್ನು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ನಿಯಮಿಸಬಹುದಾದ ಅಂಥ ಪ್ರಾಧಿಕಾರಿಯು ನೀಡಿರತಕ್ಕದ್ದು ಮತ್ತು ಆ ನಂತರ ಅವನು ಒಬ್ಬ ಗೃಹ ರಕ್ಷಕನಿಗೆ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ರಕ್ಷಣೆಯನ್ನು ಹೊಂದಿರತಕ್ಕದ್ದು ಮತ್ತು ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**5. ಸದಸ್ಯರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.–** (1) ಕಮಾಂಡೆಂಟ್ ಜನರಲ್‌ನು, ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಯಾವುದೇ ಕಾಲದಲ್ಲಿ ತರಬೇತಿಗಾಗಿ ಅಥವಾ ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗನುಸಾರವಾಗಿ ರಾಜ್ಯದ ಯಾವುದೇ ಭಾಗದಲ್ಲಿ ಗೃಹ ರಕ್ಷಕ ದಳಕ್ಕೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಕರೆಯಬಹುದು.

(2) ಕಮಾಂಡೆಂಟನು, ಯಾವುದೇ ಕಾಲದಲ್ಲಿ ಗೃಹ ರಕ್ಷಕ ದಳದ ಸದಸ್ಯನನ್ನು ತರಬೇತಿಗಾಗಿ ಅಥವಾ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಅವನಿಗೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಆಹ್ವಾನಿಸಬಹುದು.

(3) ಒಂದು ಜಿಲ್ಲೆಯ ಜಿಲ್ಲಾಧಿಕಾರಿಯು ಅಥವಾ ಪೋಲೀಸ್ ಅಧೀಕ್ಷಕನು ಯಾವುದೇ ಕಾಲದಲ್ಲಿ ಈ ಅಧಿನಿಯಮದಿಂದ ಅಥವಾ ಅಡಿಯಲ್ಲಿ ಅವನಿಗೆ ವಹಿಸಲಾದ ಯಾವುದೇ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಗೃಹ ರಕ್ಷಕ ದಳದ ಸದಸ್ಯನನ್ನು ಕರೆಯಬಹುದು.

[1][**5ಎ. ಗೃಹ ರಕ್ಷಕ ದಳದವರು ಕರ್ತವ್ಯಕ್ಕೆ ಹಾಜರಾಗಲು ಅನುಮತಿಸಲು ನಿಯೋಜಕನ ಹೊಣೆಗಾರಿಕೆ.–** (1) ಪ್ರತಿಯೊಬ್ಬ ನಿಯೋಜಕನು ತತ್ಕಾಲದಲ್ಲಿ ತನ್ನಿಂದ ಅಥವಾ ತನ್ನ ಅಡಿಯಲ್ಲಿ ನಿಯೋಜಿತನಾದ ಒಬ್ಬ ಗೃಹ ರಕ್ಷಕ ದಳದವನನ್ನು ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು ಗೃಹ ರಕ್ಷಕ ದಳದ ಕರ್ತವ್ಯಗಳಿಗೆ ಹಾಜರಾಗಲು ಅನುಮತಿಸತಕ್ಕದ್ದು. ಯಾವುದೇ ಕಾನೂನು ಅಥವಾ ಅವನ ಮತ್ತು ಅಂಥ ಗೃಹ ರಕ್ಷಕ ದಳದವನ ನಡುವಣ ಒಪ್ಪಂದದಲ್ಲಿ ಏನೇ ಇದ್ದಾಗ್ಯೂ, ನಿಯೋಜಕನು, ಅಂಥ ಗೃಹ ರಕ್ಷಕನನ್ನು ಅಂಥ ಕರ್ತವ್ಯಕ್ಕೆ ಹಾಜರಾಗಲು ಕರೆಯದೆ ಇದ್ದರೆ ಗೃಹ ರಕ್ಷಕ ದಳದವನಾಗಿ ಅವನ ಕರ್ತವ್ಯದ ಅವಧಿಗೆ ಅವನು ಪಡೆಯುತ್ತಿದ್ದ ಆದರೆ ಈ ಅವಧಿಯು ಒಂದು ವರ್ಷದಲ್ಲಿ 60 ದಿನಗಳನ್ನು ಮೀರದಂತೆ ವೇತನ ಮತ್ತು ಭತ್ಯೆಗಳನ್ನು ಸಂದಾಯ ಮಾಡಲು ಬದ್ಧವಾಗಿರತಕ್ಕದ್ದು.

**ವಿವರಣೆ:–** ಈ ಉಪ ಪ್ರಕರಣದ ಉದ್ದೇಶಕ್ಕಾಗಿ ಕರ್ತವ್ಯ ಎಂಬುದರಲ್ಲಿ ಅಂಥ ಗೃಹ ರಕ್ಷಕನ ಯಾವುದೇ ತರಬೇತಿಯು ಒಳಗೊಳ್ಳುತ್ತದೆ.

(2) ಯಾರೇ ನಿಯೋಜಕನು ಯಾರೇ ನೌಕರನನ್ನು ಅವನು ಗೃಹ ರಕ್ಷಕ ದಳದ ಸದಸ್ಯನಾಗಿದ್ದಾನೆ ಎಂಬ ಕಾರಣ ಮಾತ್ರದಿಂದಲೇ ಪೂರ್ವಾಗ್ರಹ ಪೀಡಿತನಾಗಿ ವಜಾ ಮಾಡತಕ್ಕದ್ದಲ್ಲ, ತೆಗೆದುಹಾಕತಕ್ಕದ್ದಲ್ಲ ಅಥವಾ ಅಮಾನತು ಗೊಳಿಸತಕ್ಕದ್ದಲ್ಲ ಅಥವಾ ಯಾವುದೇ ಇತರೆ ಕ್ರಮ ಜರುಗಿಸತಕ್ಕದ್ದಲ್ಲ.

(3) (1)ನೇ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಯಾರಾದರೂ ಉಲ್ಲಂಘಿಸಿದರೆ ಅವನನ್ನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿಸತಕ್ಕದ್ದು.

(4) ಯಾರೇ ನೌಕರನು ಅಥವಾ ಅಂಥ ನೌಕರನಿಗೆ ಸಂಬಂಧಿಸಿದ ಕಮಾಂಡೆಂಟ್‌ನ ಮೂಲಕ ಆ ನೌಕರನು, ಅಂಥ ನಿಯೋಜಕನಲ್ಲಿ ನಿಯೋಜನೆಗಾಗಿ ಅರ್ಜಿ ಸಲ್ಲಿಸುವಾಗ, ಅವನು ಒಬ್ಬ ಗೃಹ ರಕ್ಷಕನೆಂದು ತಿಳಿಸಿದ್ದ ಹೊರತು ಅಥವಾ ಹಾಗೆ ನೌಕರನಾಗಿರುವ ಸಮಯದಲ್ಲಿ ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿ ಭರ್ತಿಯಾದಾಗ ಆ ಬಗ್ಗೆ ತಿಳಿಸಿದ್ದ ಹೊರತು, ಈ ಪ್ರಕರಣದಲ್ಲಿ ಇರುವುದಾವುದೂ ಆ ಯಾರೇ ನಿಯೋಜಕನಿಗೆ ಅನ್ವಯಿಸತಕ್ಕದ್ದಲ್ಲ.][1]

**1. 5ಎ ಪ್ರಕರಣವನ್ನು 28.1.1977 ರಿಂದ ಜಾರಿಗೆ ಬರುವಂತೆ 1977ರ ಅಧಿನಿಯಮ 11ರ ಮೂಲಕ ಸೇರಿಸಲಾಗಿದೆ.**

**6. ಅಧಿಕಾರಗಳು, ರಕ್ಷಣೆ ಮತ್ತು ನಿಯಂತ್ರಣ.–** (1) ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು 5ನೇ ಪ್ರಕರಣದ ಅಡಿಯಲ್ಲಿ ಕರೆದಿರುವಾಗ ಅವನು [1][ಕರ್ನಾಟಕ ಪೊಲೀಸ್ ಅಧಿನಿಯಮ, 1963]ರ ಅಡಿಯಲ್ಲಿ ನೇಮಕನಾದ ಪೊಲೀಸ್ ಅಧಿಕಾರಿಗಿರುವಂಥವೇ ಅಧಿಕಾರಗಳು, ವಿಶೇಷಾಧಿಕಾರಗಳು ಮತ್ತು ರಕ್ಷಣೆಗಳನ್ನು ಹೊಂದಿರತಕ್ಕದ್ದು.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

(2) ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಅಧಿಕಾರಗಳನ್ನು ಚಲಾಯಿಸುವಾಗ ಅಥವಾ ಅವನ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಅಥವಾ ಮಾಡಲುದ್ದೇಶಿಸಿದ ಯಾವುದರ ಬಗ್ಗೆಯೂ ಅದಕ್ಕೆ ಕಮಾಂಡೆಂಟ್ ಜನರಲ್‌ನ ಪೂರ್ವಾನುಮತಿ ಪಡೆದಿದ್ದ ಹೊರತು ಗೃಹ ರಕ್ಷಕ ದಳದ ಸದಸ್ಯನ ವಿರುದ್ಧ ಯಾವುದೇ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**7. ಪೊಲೀಸ್ ದಳದ ಅಧಿಕಾರಿಗಳಿಂದ ನಿಯಂತ್ರಣ.–** ಪೊಲೀಸ್ ದಳದ ನೆರವಿಗಾಗಿ 5ನೇ ಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಸದಸ್ಯರನ್ನು ಕರೆದಿರುವಾಗ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಷ್ಟರಮಟ್ಟಿಗೆ ಪೊಲೀಸ್ ದಳದ ಅಧಿಕಾರಿಗಳ ನಿಯಂತ್ರಣದಲ್ಲಿರತಕ್ಕದ್ದು.

**8. ಸದಸ್ಯನಾಗಿರುವುದು ನಿಂತು ಹೋದ ನಂತರ ಪ್ರಮಾಣ ಪತ್ರ, ಆಯುಧಗಳು, ಇತ್ಯಾದಿಗಳನ್ನು ಹಿಂದಕ್ಕೆ ಒಪ್ಪಿಸುವುದು.–** (1) ಯಾವುದೇ ಕಾರಣಕ್ಕಾಗಿ ಗೃಹ ರಕ್ಷಕ ದಳದ ಸದಸ್ಯನಾಗಿರುವುದು ನಿಂತು ಹೋಗಿರುವ ಅಥವಾ ತನ್ನ ಸದಸ್ಯತ್ವಕ್ಕೆ ರಾಜಿನಾಮೆ ಸಲ್ಲಿಸಿದ ಯಾರೇ ವ್ಯಕ್ತಿಯು ಕಮಾಂಡೆಂಟ್‌ನಿಗೆ ಅಥವಾ ಕಮಾಂಡೆಂಟ್‌ನು ನಿರ್ದೇಶಿಸಿದ ಅಂಥ ವ್ಯಕ್ತಿಗೆ ಮತ್ತು ಅಂಥ ಸ್ಥಳದಲ್ಲಿ ಅವನ ನೇಮಕಾತಿಯ ಅಥವಾ ಪದದ ಪ್ರಮಾಣಪತ್ರ ಮತ್ತು ಅಂಥ ಸದಸ್ಯನಾಗಿ ಅವನಿಗೆ ನೀಡಲಾದ ಆಯುಧಗಳು, ವಿಶೇಷ ಉಡುಗೆ ತೊಡುಗೆಗಳು, ಬಟ್ಟೆಗಳು ಅಥವಾ ಇತರೆ ವಸ್ತುಗಳನ್ನು ಕೂಡಲೇ ಹಿಂದಕ್ಕೆ ಒಪ್ಪಿಸತಕ್ಕದ್ದು.

(2) ಯಾರೇ ಮ್ಯಾಜಿಸ್ಟ್ರೇಟನು ಮತ್ತು ಉಪಪೊಲೀಸ್ ಅಧೀಕ್ಷಕ ಅಥವಾ ಸಹಾಯಕ ಪೊಲೀಸ್ ಅಧೀಕ್ಷಕ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು, ಆ ಸಮಯದಲ್ಲಿ ವಿಶೇಷ ಕಾರಣಗಳನ್ನು ಲಿಖಿತದಲ್ಲಿ ದಾಖಲು ಮಾಡಿ ಹಾಗೆ ಹಿಂದಕ್ಕೆ ಒಪ್ಪಿಸದಿರುವ ಯಾವುದೇ ಪ್ರಮಾಣ ಪತ್ರ, ಆಯುಧಗಳು, ವಿಶೇಷ ಉಡುಗೆ ತೊಡಿಗೆಗಳು, ಬಟ್ಟೆ ಅಥವಾ ಇತರೆ ಅಗತ್ಯ ವಸ್ತುಗಳನ್ನು ಶೋಧಿಸಲು ಮತ್ತು ಅವುಗಳು ದೊರೆಯಬಹುದಾದಲ್ಲಿಂದ ಅವುಗಳನ್ನು ವಶಪಡಿಸಿಕೊಳ್ಳಲು ಒಂದು ವಾರೆಂಟನ್ನು ಹೊರಡಿಸಬಹುದು. ಹೀಗೆ ಹೊರಡಿಸಿದ ಪ್ರತಿ ವಾರೆಂಟನ್ನೂ [1][1973ರ ದಂಡ ಪ್ರಕ್ರಿಯಾ ಸಂಹಿತೆ][1] ಯ ಉಪಬಂಧಗಳಿಗನುಸಾರವಾಗಿ ಒಬ್ಬ ಪೊಲೀಸ್ ಅಧಿಕಾರಿಯು ಅಥವಾ ಮ್ಯಾಜಿಸ್ಟ್ರೇಟನು ಅಥವಾ ವಾರೆಂಟುಗಳನ್ನು ನೀಡುವ ಪೊಲೀಸ್ ಅಧಿಕಾರಿಯು ಹಾಗೆ ನಿರ್ದೇಶಿಸಿದ ಯಾರೇ ಇತರ ವ್ಯಕ್ತಿಯ ಮೂಲಕ ಕಾರ್ಯಗತಗೊಳಿಸತಕ್ಕದ್ದು.

**1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.**

(3) ಕಮಾಂಡೆಂಟ್ ಜನರಲ್‌ನ ಆದೇಶದ ಅಡಿಯಲ್ಲಿನ ಯಾವುದೇ ವಸ್ತುವನ್ನು, ಯಾವ ವ್ಯಕ್ತಿಗೆ ಅದನ್ನು ನೀಡಲಾಗಿದೆಯೋ ಅದು ಆ ವ್ಯಕ್ತಿಯ ಸ್ವತ್ತಾಗಿದ್ದರೆ ಈ ಪ್ರಕರಣದಲ್ಲಿ ಇರುವುದಾವುದೂ ಅದಕ್ಕೆ ಅನ್ವಯವಾಗುವುದಿಲ್ಲ ಎಂದು ಭಾವಿಸತಕ್ಕದ್ದು.

**9. ಕರ್ತವ್ಯ ನಿರ್ಲಕ್ಷ್ಯ, ಇತ್ಯಾದಿಗಳಿಗಾಗಿ ಸದಸ್ಯರಿಗೆ ಶಿಕ್ಷೆ.–** (1) ಕಮಾಂಡೆಂಟ್‌ನು, ತನ್ನ ನಿಯಂತ್ರಣ ದಲ್ಲಿರುವ ಗೃಹ ರಕ್ಷಕ ದಳದ ಯಾರೇ ಸದಸ್ಯನಿಗೆ, ಅಂಥ ಸದಸ್ಯನು ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಪ್ರಕಾರ್ಯಗಳನ್ನು ಅಥವಾ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಅವನ ಪ್ರಕಾರ್ಯಗಳ ಮತ್ತು ಕರ್ತವ್ಯಗಳ ಪಾಲನೆಗಾಗಿ ಅವನಿಗೆ ನೀಡಲಾದ ಯಾವುದೇ ಕಾನೂನು ಸಮ್ಮತ ಆದೇಶವನ್ನು ಅಥವಾ ನಿರ್ದೇಶನವನ್ನು ಪಾಲಿಸಲು ನಿರ್ಲಕ್ಷ್ಯ ತೋರಿದರೆ ಅಥವಾ ನಿರಾಕರಿಸಿದರೆ ಅಥವಾ ಯಾವುದೇ ಶಿಸ್ತು ಉಲ್ಲಂಘನೆಯ ಅಥವಾ ದುರ್ನಡತೆಯ ತಪ್ಪಿತಸ್ಥನಾದರೆ, ಅವನನ್ನು ಅಮಾನತು ಮಾಡುವ, ಕೆಳದರ್ಜೆಗೆ ಇಳಿಸುವ ಅಥವಾ ವಜಾ ಮಾಡುವ ಅಥವಾ ಐವತ್ತು ರೂಪಾಯಿಗಳಿಗೆ ಮೀರದ ದಂಡವನ್ನು ವಿಧಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(2) ಕಮಾಂಡೆಂಟ್ ಜನರಲ್‌ನು, ತನ್ನ ನಿಯಂತ್ರಣದಲ್ಲಿರುವ ಒಂದು ಹುದ್ದೆಗೆ ನಿಯೋಜಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನ ಸಂಬಂಧದಲ್ಲಿ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡವನ್ನು

ವಿಧಿಸಬಹುದು ಮತ್ತು ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಕ್ರಿಮಿನಲ್ ಆರೋಪದ ಮೇಲೆ ಅವನು ಅಪರಾಧ ನಿರ್ಣೀತನಾದ ವರ್ತನೆಯ ಕಾರಣದ ಮೇಲೆ ಸಹ ವಜಾ ಮಾಡಬಹುದು.

(3) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು, ಇನ್ನು ಮುಂದೆ ಗೃಹ ರಕ್ಷಕ ದಳದ ಯಾರೇ ಸದಸ್ಯನ ಸೇವೆಯು ಅಗತ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ, ಕಮಾಂಡೆಂಟ್ ಜನರಲ್‌ನು ಅಥವಾ ಸಂದರ್ಭಾನುಸಾರ ಕಮಾಂಡೆಂಟನು ಅಂಥ ಯಾರೇ ಸದಸ್ಯನನ್ನು ಯಾವುದೇ ಸಮಯದಲ್ಲಿ ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ವಜಾ ಮಾಡಬಹುದು.

(4) ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು ಅಮಾನುತುಗೊಳಿಸುವ, ಕೆಳದರ್ಜೆಗೆ ಇಳಿಸುವ, ವಜಾ ಮಾಡುವ ಅಥವಾ ದಂಡ ವಿಧಿಸುವ ಒಂದು ಆದೇಶವನ್ನು ಹೊರಡಿಸಿದಾಗ, ಅವನು ಅಂಥ ಆದೇಶವನ್ನು ಮತ್ತು ಅದಕ್ಕೆ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಕಮಾಂಡೆಂಟ್ ಜನರಲ್‌ನು ಅಥವಾ ಕಮಾಂಡೆಂಟನು ಸಂಬಂಧಪಟ್ಟ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(5) (ಎ) ಕಮಾಡೆಂಟನ ಆದೇಶದಿಂದ ಬಾಧಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನು ಅಂಥ ಆದೇಶದ ವಿರುದ್ಧ ಕಮಾಂಡೆಂಟ್ ಜನರಲ್‌ನಿಗೆ ಅಪೀಲು ಸಲ್ಲಿಸಬಹುದು ಮತ್ತು ಕಮಾಡೆಂಟ್ ಜನರಲ್‌ನ ಅಂಥ ಆದೇಶದಿಂದ ಬಾಧಿತನಾದ ಗೃಹ ರಕ್ಷಕ ದಳದ ಯಾರೇ ಸದಸ್ಯನು ಅಂಥ ಆದೇಶದ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(ಬಿ) (ಎ) ಖಂಡದ ಅಡಿಯಲ್ಲಿನ ಅಪೀಲನ್ನು, ಆ ಗೃಹ ರಕ್ಷಕ ದಳದ ಸದಸ್ಯನಿಗೆ ಅಂಥ ಆದೇಶವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

(6) ಕಮಾಂಡೆಂಟ್ ಜನರಲ್‌ನು ಅಥವಾ ರಾಜ್ಯ ಸರ್ಕಾರವು ಸ್ವತಃ ತಾನೇ ಅಥವಾ ಅರ್ಜಿಯ ಮೇಲೆ ತನಗೆ ಅಥವಾ ಅದಕ್ಕೆ ಅಧೀನನಾದ ಯಾರೇ ಅಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಆದೇಶದ ದಾಖಲೆಯನ್ನು ಅಂಥ ಆದೇಶದ ಕಾನೂನು ಸಮ್ಮತತೆ ಮತ್ತು ಔಚಿತ್ಯತೆಯನ್ನು ತಾನು ಅಥವಾ ಅದು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಅಥವಾ ಪರೀಕ್ಷಿಸಬಹುದು ಮತ್ತು ಆ ಸಂಬಂಧದಲ್ಲಿ ತಾನು ಅಥವಾ ಅದು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸಬಹುದು.

(7) ಈ ಪ್ರಕರಣದ ಅಡಿಯಲ್ಲಿ ಗೃಹ ರಕ್ಷಕ ದಳದ ಒಬ್ಬ ಸದಸ್ಯನಿಗೆ ವಿಧಿಸಿದ ಯಾವುದೇ ದಂಡವು 10ನೇ ಪ್ರಕರಣದ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅಂಥ ಸದಸ್ಯನು ಗುರಿಯಾಗುವ ಯಾವುದೇ ಶಿಕ್ಷೆಗೆ ಹೆಚ್ಚಿಗೆಯಾಗಿ ಇರತಕ್ಕದ್ದು.

**10. ದಂಡನೆ.–** (1) ಗೃಹ ರಕ್ಷಕ ದಳದ ಯಾರೇ ಸದಸ್ಯನನ್ನು 5ನೇ ಪ್ರಕರಣದ ಅಡಿಯಲ್ಲಿ ಕರೆದಾಗ, ಯುಕ್ತ ಕಾರಣವಿಲ್ಲದೆ ಅಂಥ ಆದೇಶವನ್ನು ಪಾಲಿಸಲು ಅಥವಾ ಅವನು ಗೃಹ ರಕ್ಷಕ ದಳದ ಸದಸ್ಯನಾಗಿ ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ಅವನ ಕರ್ತವ್ಯಗಳ ನಿರ್ವಹಣೆಗಾಗಿ ಅವನಿಗೆ ನೀಡಲಾದ ಯಾವುದೇ ಕಾನೂನು ಸಮ್ಮತ ಆದೇಶ ಅಥವಾ ನಿರ್ದೇಶನವನ್ನು ಪಾಲಿಸಲು ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನನ್ನು ಅಪರಾಧ ನಿರ್ಣಯದ ತರುವಾಯ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಸಾದಾ ಕಾರಾವಾಸದಿಂದ ಅಥವಾ ಎರಡು ನೂರ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಗೃಹ ರಕ್ಷಕ ದಳದ ಯಾರೇ ಸದಸ್ಯನು 8ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ತನ್ನ ನೇಮಕಾತಿಯ ಪ್ರಮಾಣಪತ್ರ ಅಥವಾ ಅಧಿಕಾರ ಪ್ರಮಾಣಪತ್ರ ಅಥವಾ ಯಾವುದೇ ಇತರೆ ವಸ್ತುಗಳನ್ನು ಹಿಂದಕ್ಕೆ ಒಪ್ಪಿಸಲು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದರೆ ಅಥವಾ ನಿರಾಕರಿಸಿದರೆ, ಅವನನ್ನು ಅಂಥ ಅಪರಾಧ ನಿರ್ಣಯದ ತರುವಾಯ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಕಮಾಂಡೆಂಟರ ಪೂರ್ವಾನುಮತಿಯಿಲ್ಲದೆ (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಯಾವುದೇ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಮಾಡಿರುವ ಯಾರೇ ವ್ಯಕ್ತಿಯನ್ನು ಪೊಲೀಸ್ ಅಧಿಕಾರಿಯು ವಾರೆಂಟ್ ಇಲ್ಲದೆ ದಸ್ತಗಿರಿ ಮಾಡಬಹುದು.

**11. ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮ.–** ರಾಜ್ಯ ಸರ್ಕಾರವು, ಯಾವುದೇ ಸಮಯದಲ್ಲಿ ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಕಮಾಂಡೆಂಟ್ ಅಥವಾ ಕಮಾಂಡೆಂಟ್ ಜನರಲ್‌ನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅಜಾಗರೂಕತೆ ಅಥವಾ ನಿರ್ಲಕ್ಷ್ಯತೆ ತೋರಿದ್ದಾನೆಂದು ಅಥವಾ ಅನ್ಯಥಾ ಆ ಕರ್ತವ್ಯ ನಿರ್ವಹಣೆಗೆ ದಕ್ಷನಲ್ಲವೆಂದು ಪರಿಗಣಿಸಿದರೆ ಅವನನ್ನು ವಜಾ ಮಾಡಬಹುದು, ತೆಗೆದುಹಾಕಬಹುದು, ಅಮಾನತುಗೊಳಿಸಬಹುದು ಅಥವಾ ಕೆಳ ಹುದ್ದೆಗೆ ಅಥವಾ ದರ್ಜೆಗೆ ಇಳಿಸಬಹುದು ಮತ್ತು ಯಾರೇ ಅಂಥ ಅಧಿಕಾರಿಯ ನಿರ್ಲಕ್ಷ್ಯ ಅಥವಾ ಆದೇಶಗಳ ಉಲ್ಲಂಘನೆಯಿಂದಾಗಿ ರಾಜ್ಯ ಸರ್ಕಾರಕ್ಕೆ ಉಂಟಾದ ಯಾವುದೇ ಆರ್ಥಿಕ ನಷ್ಟದ ಪೂರ್ಣ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು ಅವನ ವೇತನ ಅಥವಾ ಭತ್ಯೆಗಳಿಂದ ವಸೂಲಿ ಮಾಡಲು ಆದೇಶಿಸಬಹುದು.

**12. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧಿಸಬಹುದು ಅಥವಾ ವಿನಿಯಮಿಸಬಹುದು ಎಂದರೆ:–

(ಎ) 5ನೇ ಪ್ರಕರಣದ ಅಡಿಯಲ್ಲಿ ಕಮಾಂಡೆಂಟ್‌ನಿಗೆ ಮತ್ತು ಕಮಾಂಡೆಂಟ್ ಜನರಲ್‌ನಿಗೆ ಪ್ರದತ್ತವಾದ ಅಧಿಕಾರಗಳನ್ನು ಗೃಹ ರಕ್ಷಕ ದಳದ ಯಾರೇ ಅಧಿಕಾರಿಯು ಚಲಾಯಿಸುವ ಬಗ್ಗೆ;

[1][(ಎಎ) 3ನೇ ಪ್ರಕರಣದ (2ಬಿ) ಉಪಪ್ರಕರಣದ ಅಡಿಯಲ್ಲಿ ಕಮಾಂಡೆಂಟರ ಆಯ್ಕೆಗೆ ಇರುವ ಅರ್ಹತೆ ಮತ್ತು ಕಾರ್ಯವಿಧಾನ ಮತ್ತು ಅವರ ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳ ಬಗ್ಗೆ;][1]

**1. 2003ರ ಅಧಿನಿಯಮ 19ರ ಮೂಲಕ 22.4.2003 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.**

(ಬಿ) ಪೊಲೀಸ್ ದಳಕ್ಕೆ ನೆರವು ನೀಡುವುದಕ್ಕಾಗಿ ಕೆಲಸ ಮಾಡುವಾಗ ಗೃಹ ರಕ್ಷಕ ದಳದ ಸದಸ್ಯರ ಮೇಲೆ ಪೊಲೀಸ್ ದಳದ ಅಧಿಕಾರಿಗಳು ನಿಯಂತ್ರಣವನ್ನು ಹೊಂದಿರುವ ಬಗ್ಗೆ;

(ಸಿ) ಗೃಹ ರಕ್ಷಕ ದಳದ ಸದಸ್ಯರ ಸಂಘಟನೆ, ನೇಮಕಾತಿ, ಸೇವಾಷರತ್ತುಗಳು, ಪ್ರಕಾರ್ಯಗಳು, ಶಿಸ್ತು, ಆಯುಧಗಳು, ವಿಶೇಷ ಉಡುಗೆ ತೊಡಿಗೆಗಳು ಮತ್ತು ಬಟ್ಟೆಗಳ ಬಗ್ಗೆ ಮತ್ತು ಅವರನ್ನು ಸೇವೆಗಾಗಿ ಕರೆಯಬಹುದಾದಂಥ ವಿಧಾನದ ಬಗ್ಗೆ;

(ಡಿ) 6ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಬಹುದಾದ ಯಾವುವೇ ಅಧಿಕಾರಗಳನ್ನು ಗೃಹ ರಕ್ಷಕ ದಳದ ಸದಸ್ಯರು ಚಲಾಯಿಸುವ ಬಗ್ಗೆ;

(ಇ) ಕಮಾಂಡೆಂಟ್‌ನ ಅಥವಾ ಕಮಾಂಡೆಂಟ್ ಜನರಲ್‌ನ ವಿರುದ್ಧ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವಾಗ ಅನುಸರಿಸಬೇಕಾದ ಕಾರ್ಯ ವಿಧಾನದ ಬಗ್ಗೆ;

(ಎಫ್) ಈ ಅಧಿನಿಯಮದ ಉಪಬಂಧಗಳನ್ನು ಸಾಮಾನ್ಯವಾಗಿ ಕಾರ್ಯಗತ ಗೊಳಿಸುವ ಬಗ್ಗೆ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಎರಡೂ ಸದನಗಳು ಆ ಯಾವುದೇ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಆ ಎರಡೂ ಸದನಗಳು ಆ ನಿಯಮವನ್ನು ಮಾಡಕೂಡದೆಂದು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು, ಈ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**13. ಗೃಹ ರಕ್ಷಕ ದಳದ ಸದಸ್ಯರು ಲೋಕ ನೌಕರರಾಗಿರುವುದು.–** ಈ ಅಧಿನಿಯಮದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗೃಹ ರಕ್ಷಕ ದಳದ ಸದಸ್ಯರುಗಳನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರು ಎಂದು ಭಾವಿಸತಕ್ಕದ್ದು.

**14. ಗೃಹ ರಕ್ಷಕ ದಳದ ಸದಸ್ಯರನ್ನು ಸ್ಥಳೀಯ ಪ್ರಾಧಿಕಾರಗಳ ಸದಸ್ಯರಾಗುವುದರಿಂದ ಅನರ್ಹಗೊಳಿಸದಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಗೃಹ ರಕ್ಷಕ ದಳದ ಒಬ್ಬ ಸದಸ್ಯನನ್ನು, ಅವನು ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿದ್ದಾನೆಂಬ ಅಥವಾ ಅವನು ಗೃಹ ರಕ್ಷಕ ದಳದ ಒಬ್ಬ ಸದಸ್ಯನಾಗಿರುವುದರಿಂದ ಸರ್ಕಾರದಲ್ಲಿ ಲಾಭದಾಯಕ ಹುದ್ದೆಯನ್ನು ಹೊಂದಿದ್ದಾನೆಂಬ ಕಾರಣ ಮಾತ್ರದಿಂದಲೇ ಯಾವುದೇ ಸ್ಥಳೀಯ ಪ್ರಾಧಿಕಾರದ ಸದಸ್ಯನನ್ನಾಗಿ ಆಯ್ಕೆ ಮಾಡಲು ಅಥವಾ ಸದಸ್ಯನಾಗಿರಲು ಅನರ್ಹಗೊಳಿಸತಕ್ಕದ್ದಲ್ಲ.

**15. 1957ರ [1][ಕರ್ನಾಟಕ ಅಧಿನಿಯಮ][1] 4ರ ತಿದ್ದುಪಡಿ.–** 1956ರ [1][ಕರ್ನಾಟಕ][1] ವಿಧಾನ ಮಂಡಲ (ಅನರ್ಹತಾ ನಿವಾರಣೆ) ಅಧಿನಿಯಮದ, 3ನೇ ಪ್ರಕರಣದಲ್ಲಿ (ಬಿ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿಬಿ) 1962ರ [1][ಕರ್ನಾಟಕ][1] ಗೃಹ ರಕ್ಷಕ ದಳ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯನ ಹುದ್ದೆ";

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

**16. ಕೆಲವು ಅಧಿನಿಯಮಗಳ ನಿರಸನ ಮತ್ತು ಉಳಿಸುವಿಕೆಗಳು.–** ಮುಂಬಯಿ ಗೃಹ ರಕ್ಷಕ ದಳ ಅಧಿನಿಯಮ, 1947 (1947 ರ ಮುಂಬಯಿ ಅಧಿನಿಯಮ III), ಮೈಸೂರು ಗೃಹ ರಕ್ಷಕ ದಳ ಅಧಿನಿಯಮ, 1942 (1941ರ ಮೈಸೂರು ಅಧಿನಿಯಮ XIV), ಮದರಾಸು ಗೃಹ ರಕ್ಷಕ ದಳ ಅಧಿನಿಯಮ, 1948 (1948ರ ಮದರಾಸು ಅಧಿನಿಯಮ 1) ಮತ್ತು ಕೊಡಗು ಗೃಹ ರಕ್ಷಕ ದಳ ಅಧಿನಿಯಮ, 1950 (1950ರ ಕೊಡಗು ಅಧಿನಿಯಮ 1) – ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು' [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ [1][ಕರ್ನಾಟಕ][1] ಅಧಿನಿಯಮ III)ರ 6ನೇ ಪ್ರಕರಣವು ಅಂಥ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮಿತಿಯ 8 ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಗಳನ್ನು ನಿರಸನಗೊಳಿಸಿದ್ದು ಮತ್ತು ಈ ಅಧಿನಿಯಮದ ಮೂಲಕ ಪುನರ್ ಅಧಿನಿಯಮಿತಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

ಮತ್ತೂ ಪರಂತು, ಈ ಅಧಿನಿಯಮವು ಜಾರಿಗೆ ಬರುವ ನಿಕಟಪೂರ್ವದಲ್ಲಿ ನಿರಸಿತವಾದ ಯಾವುದೇ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯರನ್ನು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಗೃಹ ರಕ್ಷಕ ದಳದ ಸದಸ್ಯರೆಂದು ಭಾವಿಸತಕ್ಕದ್ದು.

**17. 1962ರ [1][ಕರ್ನಾಟಕ][1] ಅಧ್ಯಾದೇಶ ಸಂಖ್ಯೆ 4ರ ನಿರಸನ.–** (1) 1962ರ [1][ಕರ್ನಾಟಕ][1] ಗೃಹ ರಕ್ಷಕ ದಳದ ಅಧ್ಯಾದೇಶವನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

**1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.**

ಹಾಗೆ ನಿರಸನಗೊಂಡಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು (ಹೊರಡಿಸಲಾದ ಯಾವುದೇ ಅಧಿಸೂಚನೆ ಅಥವಾ ಆದೇಶ, ನಿಯಮ ಅಥವಾ ಮಾಡಲಾದ ನೇಮಕಾತಿಯೂ ಸೇರಿದಂತೆ) ಈ ನಿಯಮದಿಂದ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಅಥವಾ ಅಂಥ ಕ್ರಮವನ್ನು ಕೈಗೊಂಡ ದಿನಾಂಕದಂದು ಈ ಅಧಿನಿಯಮವು ಜಾರಿಯಲ್ಲಿತ್ತು ಎಂಬಂತೆ ಅದನ್ನು ಮಾಡಲಾದ ಅಥವಾ ಕ್ರಮ ಕೈಗೊಳ್ಳಲಾದ ದಿನದಿಂದ ಈ ಅಧಿನಿಯಮವು ಜಾರಿಯಲ್ಲಿದ್ದರೆ ಹೇಗೋ ಹಾಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

* * *

The above translation of the Karnataka Home Guards Act 1962 (Karnataka Act 35 of 1962) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

GOVERNOR OF KARNATAKA

ಪಿ.ಆರ್. 190

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.